# ‘ಟಾಪ್ ಟೆನ್’ ಬೆಡಗಿ



ಬಾಲಿವುಡ್‌ನಲ್ಲಿ ಕೀರ್ತಿ ಮತ್ತು ಹಣ ಎರಡರ ಗಳಿಕೆಯಲ್ಲೂ ದೀಪಿಕಾ ಪಡುಕೋಣೆ ಇತರೆಲ್ಲ ಹೀರೋಯಿನ್‌ಗಳಿಗಿಂತ ಮುಂದಿದ್ದಾಳೆ. ಫೋರ್ಬ್ಸ್ ಪ್ರಕಟಿಸಿದ ಜಾಗತಿಕ ಸಿನಿಮಾರಂಗದ ಅತ್ಯಧಿಕ ಆದಾಯ ಗಳಿಕೆಯ ಸಿನಿಮಾ ತಾರೆಯರ ಪಟ್ಟಿ ಗಮನಿಸಿದರೆ ಇದು ಸ್ಪಷ್ಟವಾಗುತ್ತದೆ. ಫೋರ್ಬ್ಸ್ ನ (ಜೂನ್ ತಿಂಗಳಿಗೆ ಕೊನೆಗೊಂಡ ವರ್ಷದಲ್ಲಿ) ಅತ್ಯಧಿಕ ಹಣ ಗಳಿಸಿರುವ ಬಾಲಿವುಡ್ ತಾರೆಯರ ‘ಟಾಪ್ ಟೆನ್’ ಪಟ್ಟಿಯಲ್ಲಿ ದೀಪಿಕಾಳದ್ದು ಆರನೆಯ ಸ್ಥಾನ. ಟಾಪ್ ಟೆನ್ ಪಟ್ಟಿಯಲ್ಲಿ ದೀಪಿಕಾ ನಂತರದ ಸ್ಥಾನ ಗಳಿಸಿರುವ ಇನ್ನೊಬ್ಬ ನಟಿಯೆಂದರೆ ಪ್ರಿಯಾಂಕಾ ಚೋಪ್ರಾ.

ಶಾರೂಕ್, ಸಲ್ಮಾನ್, ಅಕ್ಷಯ್, ಹೃತಿಕ್ ಮತ್ತು ಅಮೀರ್ ಖಾನ್ ಬಳಿಕ ಸ್ಥಾನ ಪಡೆದಿರುವ ದೀಪಿಕಾ ಗಳಿಕೆ ಈ ವರ್ಷದಲ್ಲಿ ಒಟ್ಟು 70 ಕೋಟಿ ರೂಪಾಯಿಗಳಂತೆ. ಹಾಲಿವುಡ್ ನಟೀಮಣಿಯರ ಗಳಿಕೆಗೆ ಹೋಲಿಸಿದರೆ ಇದು ಕಡಿಮೆಯೇ. ಹಾಲಿವುಡ್‌ನ ನಟಿಯರಲ್ಲಿ ಅತ್ಯಧಿಕ ಹಣ ಗಳಿಸುತ್ತಿರುವ ಎಮ್ಮಾ ಸ್ಟೋನ್ 26 ದಶಲಕ್ಷ ಡಾಲರ್ ಗಳಿಸಿದ್ದು ಈ ಅಂತರ ಅಗಾಧ ಎನ್ನುವುದನ್ನೇ ತೋರಿಸುತ್ತದೆ. ಅದೇನೇ ಇದ್ದರೂ, ಬಾಲಿವುಡ್ ಮಟ್ಟಿಗೆ ದೀಪಿಕಾಳೇ ನಂಬರ್ ಒನ್. ಈ ಪಟ್ಟಿಯಲ್ಲಿ ದೀಪಿಕಾಳ ಈಗಿನ ಬಾಯ್‌ಫ್ರೆಂಡ್ ರಣವೀರ್ ಸಿಂಗ್ ಮತ್ತು ಮಾಜಿ ಪ್ರಿಯಕರ ರಣಬೀರ್ ಕಪೂರ್ ದೀಪಿಕಾಗಿಂತ ನಂತರದ ಸ್ಥಾನ ಗಳಿಸಿರುವುದು ಕೂಡಾ ಕುತೂಹಲಕರ.

2007ರಲ್ಲಿ ಚಿತ್ರರಂಗಕ್ಕೆ ಕಾಲಿಟ್ಟ ದೀಪಿಕಾ ಮತ್ತು ರಣಬೀರ್ ಒಂದು ವರ್ಷದ ಬಳಿಕವೇ ಸ್ನೇಹಿತರಾದದ್ದು. ಬಳಿಕ ಸ್ನೇಹ ಪ್ರೀತಿಗೆ ತಿರುಗಿತು. ಚಿತ್ರರಂಗದ ಡಾರ್ಲಿಂಗ್ ಜೋಡಿಯಾಗಿದ್ದ ಇಬ್ಬರೂ ಎಂಟು ವರ್ಷಗಳ ಬಳಿಕ ಬೇರ್ಪಟ್ಟದ್ದು ಅಭಿಮಾನಿಗಳಿಗೆ ಆಘಾತ ತಂದ ಸುದ್ದಿ. ಈಗಲೂ ಈ ಬೇರ್ಪಡೆಗೆ ಕಾರಣವೇನು ಎನ್ನುವುದನ್ನು ಈ ಜೋಡಿ ಬಾಯಿ ಬಿಟ್ಟಿಲ್ಲ. ಚಿತ್ರರಂಗವೇ ಇದಕ್ಕೆ ಹತ್ತಾರು ಕಾರಣಗಳನ್ನು ಊಹಿಸಿಕೊಂಡಿದೆ. ರಣಬೀರ್ ಬೇರೆ ಹುಡುಗಿಯ ಜತೆಗೆ ರೆಡ್‌ಹ್ಯಾಂಡ್ ಆಗಿ ದೀಪಿಕಾ ಕೈಗೆ ಸಿಕ್ಕಿಬಿದ್ದದ್ದು ಒಂದು ಕಾರಣವಾದರೆ; ದೀಪಿಕಾಳ ಜೊತೆಗೆ ಮಗ ಓಡಾಡುವುದು ರಣಬೀರ್ ತಾಯಿ ನೀತೂಗೆ ಇಷ್ಟವಿರಲಿಲ್ಲ ಎನ್ನುವುದು ಇನ್ನೊಂದು ಕಾರಣ. ಇನ್ನೂ ಕೆಲವರ ಪ್ರಕಾರ ಈ ಇಬ್ಬರ ಪ್ರೇಮ ಭಗ್ನಗೊಳ್ಳಲು ಕತ್ರೀನಾ ಕೈಫ್ ಕಾರಣ! ಇತ್ತೀಚೆಗೆ ತಮ್ಮ ಮೊದಲ ಪ್ರೇಮದ ಬಗ್ಗೆ ಪತ್ರಿಕೆಯೊಂದರ ಜತೆ ವಿಸ್ತೃತವಾಗಿ ಮಾತನಾಡಿದಾಗಲೂ ಈ ಇಬ್ಬರೂ ಘಟಸ್ಫೋಟದ ಕಾರಣ ಬಿಟ್ಟುಕೊಟ್ಟಿಲ್ಲ.

ದೀಪಿಕಾ ಅಭಿನಯದ ‘ಪದ್ಮಾವತಿ’ ಶೂಟಿಂಗ್ ಇನ್ನೂ ಮುಗಿದ ಹಾಗೆ ಕಾಣುತ್ತಿಲ್ಲ. ಈ ಹಿಂದಿನ ನಿರ್ಧಾರದಂತೆ ನ.17ಕ್ಕೆ ಚಿತ್ರ ಬಿಡುಗಡೆಯಾಗಬೇಕು. ಆದರೆ ಶೂಟಿಂಗ್‌ನಲ್ಲಿ ವಿಘ್ನ, ಪ್ರತಿಭಟನೆಗಳ ಕಾರಣ ಬಿಡುಗಡೆ ಮುಂದಿನ ವರ್ಷಕ್ಕೆ ಹೋದರೂ ಆಶ್ಚರ್ಯವಿಲ್ಲ. ಈ ಚಿತ್ರಕ್ಕೂ ದೀಪಿಕಾ, ಇಬ್ಬರು ಹೀರೋಗಳಿಗಿಂತ ಹೆಚ್ಚು ಸಂಭಾವನೆ ತೆಗೆದುಕೊಂಡಿದ್ದಾಳೆ ಎನ್ನುವ ಸುದ್ದಿ ಇದೆ. ದೀಪಿಕಾಳ ಸಂಭಾವನೆ ಈ ಚಿತ್ರದಲ್ಲಿ 13 ಕೋಟಿ ರೂಪಾಯಿಯಂತೆ! ಹೀರೋಗಳಾದ ಶಾಹಿದ್ ಕಪೂರ್ ಮತ್ತು ರಣವೀರ್‌ಸಿಂಗ್ ತಲಾ 10 ಕೋಟಿ ಸಂಭಾವನೆ ಪಡೆದಿದ್ದಾರಂತೆ. ಚಿತ್ತೋರ್‌ಗಢದ ರಾಣಿ ಪದ್ಮಿನಿಯ ಪಾತ್ರದಲ್ಲಿ ಇಡೀ ಚಿತ್ರವನ್ನು ದೀಪಿಕಾ ಒಬ್ಬಳೇ ಆವರಿಸಿಕೊಂಡಿದ್ದಾಳಂತೆ. 31ರ ಹರೆಯದ ಈ ಗುಳಿಕೆನ್ನೆಯ ಸುಂದರಿಗೆ ಈ ಚಾರಿತ್ರಿಕ ಚಿತ್ರ ಬಹು ಮಹತ್ವಾಕಾಂಕ್ಷೆಯ ಚಿತ್ರವಾಗಿರುವುದಂತೂ ಖಚಿತ.

■ ಬಿಂದು